ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು

*ಹೆಣ್ಣಿನ ಮನ ಬೇಗ ಕರಗುತ್ತದೋ, ಚಿನ್ನ ಬೇಗ ಕರಗುತ್ತದೋ?*



ಹೆಣ್ಣಿನ ಮನವೇ. ಎದುರಿಗೆ ಚಿನ್ನ ಅಥವ ಚಿನ್ನದಂಥ ಗಂಡ ಇರಬೇಕಷ್ಟೆ.

ಯಶೋದಾ ಶಿವಣ್ಣ ಶೆಟ್ಟಿ, ಅಜೆಕಾರು

*ನಮ್ಮ ದೇಶಕ್ಕಾಗಿ ದುಡಿಯುವ ಯೋಧರು ರಾಜಕೀಯ ಪ್ರವೇಶಿಸಿದರೆ...?*

ಹ್ಞ! ಇಲ್ಲಿನ ಅಶಿಸ್ತು ಕಂಡು ತಮಗೆ ತಾವೇ ರೈಟ್ ಅಬೌಟ್ ಟರ್ನ್ ಹೇಳಿಕೊಂಡು ಹೋಗಿಬಿಡುತ್ತಾರೆ.

ಮಹಾಲಿಂಗ ಗೋರಬಾಳ, ಮಾಣಿಕವಾಡಿ

*ಹವಾಮಾನ ಏರುಪೇರು ಆಗಲು ಕಾರಣವೇನು?*

ಸೂರ್ಯ– ಭೂಮಿ– ಚಂದ್ರರ ತ್ರಿಕೋನ ಪ್ರೇಮದಲ್ಲಿ ಎಲ್ಲವೂ ತಿರುವುಮುರುವು ಆಗುವುದರಿಂದ.

ಮುರಲೀಧರ ಕುಲಕರ್ಣಿ, ಬೀದರ್

*ಕಾಡಿನಲ್ಲಿ ಹುಲಿಗಳ ಸಂಖ್ಯೆ ಕಡಿಮೆಯಾಗಿ ನಾಡಿನಲ್ಲಿ ಹುಲಿಗಳ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಕಾರಣವೇನು?*



ಕಾಡಿನಲ್ಲಿ ಒಣಭೋಜನ, ನಾಡಿನಲ್ಲಿ ವನಭೋಜನ ದೊರೆಯುತ್ತಿರುವುದು.

ವಿ. ಗೋವಿಂದಾಚಾರಿ, ಮೈಸೂರು

*ಇಲ್ಲಿನ ಗಣ್ಯರೊಬ್ಬರಿಗೆ ಹೂವಿನ ಹಾರದ ಬದಲು ಭಾರವಾದ ಸೇಬಿನ ಹಾರ ಹಾಕಿರುವರಲ್ಲಾ...?*

ಗಣ್ಯರ ಕತ್ತು ಆಕಾಶದತ್ತಲೇ ತಿರುಗಿತ್ತಂತೆ. ಕೊಂಚ ಸಾಮಾನ್ಯರತ್ತಲೂ ಕತ್ತು ತಗ್ಗಿಸಿ ನೋಡಲೆಂದು ಈ ಉಪಾಯ.

ನರಸಿಂಹ ಪೈ, ಕಾಸರಕೋಡ

*ಕೈಗೆ ಮೆಹಂದಿ ಹಚ್ಚುವುದಕ್ಕೂ, ತಲೆಗೆ ಮೆಹಂದಿ ಹಚ್ಚುವುದಕ್ಕೂ ಏನು ವ್ಯತ್ಯಾಸ?*

ವಯಸ್ಸಿನದೇ; ಮೈ ಬಿಸಿಯಾಗುವ ಕಾಲಕ್ಕೆ ಕೈಗೆ ಮೆಹಂದಿ, ತಲೆ ಬಿಸಿ ಆಗುವ ಕಾಲಕ್ಕೆ ತಲೆಗೆ ಮೆಹಂದಿ.

ಎನ್. ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ

*ವಿದ್ಯೆ ಕಲಿಸದ ತಂದೆ ಮಕ್ಕಳಿಗೆ ಶತ್ರು. ವಿದ್ಯೆ ಕಲಿಯದ ಮಕ್ಕಳು ತಂದೆಗೆ ಏನಾಗಬೇಕು?*

ಎದೆಗೆ ಹಿಡಿದ ಗೆದ್ದಲು.

ಎಚ್.ಆರ್. ದೇಸಾಯಿ, ರಾಯಚೂರು

*ಚುನಾವಣೆಯಲ್ಲಿ ಗೆದ್ದು ಗದ್ದುಗೆ ಏರಿದವನು ಸೋತವನಿಗೆ 14 ವರ್ಷ ವನವಾಸಕ್ಕೆ ತೆರಳಲು ಆಜ್ಞಾಪಿಸಿದರೆ...?*

ಕುಣಿಯುತ್ತಾ ಸಾಗಿ, ಎರಡೇ ವರ್ಷದಲ್ಲಿ ‘ಕಾಡು ಮುಗಿಯಿತು. ಮತ್ತೊಂದನ್ನು ತೋರಿಸು’ ಎನ್ನುತ್ತಾ ಮುಗಿಬೀಳುತ್ತಾರೆ.

ಎ. ಕೃಷ್ಣಾನಂದಶೆಟ್ಟಿ, ಮುಲ್ಕಿ

*ನೀರಿನಲ್ಲೇ ಹುಟ್ಟಿ, ನೀರಿನಲ್ಲೇ ಬೆಳೆದು, ಪ್ರಕಾಶ ಕೊಡುವ ವಿದ್ಯುತ್ ಆ ನೀರನ್ನೇ ಮುಟ್ಟಿದರೆ ಶಾಕ್ ಕೊಡುತ್ತದಲ್ಲ...?*

ವಿದ್ಯುತ್‌ಗೆ ನೀರೇ ಜನನಿ. ಜನನಿಯನ್ನು ಮೂರನೆಯವರು ಮುಟ್ಟಿದರೆ ಶಾಕ್ ಮುಟ್ಟಿಸುವುದು ನಮ್ಮ ಪರಂಪರೆ.

ವಿ.ಎಸ್. ಹಿಂದೂಪುರ, ಬಳ್ಳಾರಿ

*ಹೆಂಗಸರು ಇಬ್ಬರಿದ್ದಲ್ಲಿ ಸಂತೆ; ನಾಲ್ವರಿದ್ದಲ್ಲಿ ಜಾತ್ರೆ; 40 ಜನರಿದ್ದರೆ?*

ಹಬ್ಬದ ಕಾಲದ ಫೇಮಸ್ ಲೇಡೀಸ್ ಟೈಲರಿಂಗ್ ಸೆಂಟರ್‌ನ ವೇಯ್ಟಿಂಗ್ ರೂಮ್.

ಕುಮಾರ ಚಲವಾದಿ, ಹಾಸನ

*ನೈತಿಕತೆಯ ಪಾಠ ಈಗ ಯಾರಿಗೆ ಮುಖ್ಯ?*

ಮೌಢ್ಯ, ಅಸಭ್ಯತೆ, ಕೆಟ್ಟಭಾಷೆ, ಬೊಗಳೆ ಮೆರೆಸುವ ಚಾನಲ್ ಹೆಡ್‌ಗಳಿಗೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಇನ್ಶೂರೆನ್ಸ್ ಕಂಪನಿಗಳಿಗೆ ಜನರ ಆರೋಗ್ಯ, ಜೀವ, ಕುಟುಂಬಗಳ ಬಗ್ಗೆ ನಿಜವಾದ ಕಾಳಜಿ ಇದೆ ಅಂತೀರಾ?*

ಇದೆ. ಏನಾದರೂ ಏರುಪೇರಾಗಿ ಹೆಚ್ಚು ಕ್ಲೈಮ್ಸ್ ಬಂದರೆ ಕಂಪನಿಗೆ ಲಾಸ್ ಆಗುವುದಲ್ಲ.

## ಬಹುಮಾನಿತ ಪ್ರಶ್ನೆ

ಮಹಾವೀರ ಕಾಸರ, ಶಿವಮೊಗ್ಗ

*ಲಿಪ್‌ಸ್ಟಿಕ್‌ಗೂ ವಾಕಿಂಗ್‌ಸ್ಟಿಕ್‌ಗೂ ಏನು ಸಂಬಂಧ?*

ಚಪಲಚಿತ್ತವೇ, ಚೆಲುವೆಯರ ಲಿಪ್‌ಸ್ಟಿಕ್ಕನ್ನೇ ಗಮನಿಸುತ್ತಾ ನಡೆದು, ಮ್ಯಾನ್‌ಹೋಲ್‌ನಲ್ಲಿ ಕಾಲಿಟ್ಟು, ಕೈಗೆ ವಾಕಿಂಗ್ ಸ್ಟಿಕ್ಕು!

ರತ್ನ ಸತ್ಯೇಂದ್ರ, ಮಂಗಳೂರು

*ಗೋವುಗಳನ್ನು ಸಾಯಿಸಬಾರದು ಸರಿ; ಆದರೆ ಎಮ್ಮೆಗಳನ್ನು ಸಾಯಿಸಬಹುದೆ?*

ಕೊಲ್ಲುತ್ತಿರಲಿಲ್ಲವಂತೆ... ಯಮನ ವಾಹನವಾದ ಕೋಣ ಒಂಟಿತನ ಕಾಡುತ್ತಿದೆಯೆಂದು ಯಮನಿಗೆ ಹೇಳಿದ್ದರಿಂದ...

ವಿ. ಮಾಧವ ಶಾನುಭಾಗ, ಕುಂದಾಪುರ

*ದ್ರುಪದ್, ಭೀಮ(ಪಲಾಸಿ), ಯಮ(ನ್), ಮೋಹನ, ಭೈರವಿ, ಮುಂತಾದ ಖ್ಯಾತ ಪೌರಾಣಿಕ ವ್ಯಕ್ತಿಗಳು ಸಂಗೀತದಲ್ಲಿ ಸೇರಿರುವುದೇಕೆ?*

ಭಾವ ಹೊರಡಿಸಲು ಮೋಹಕ್ಕೆ ಮೋಹನ, ಮಮಕಾರಕ್ಕೆ ಯಮ(ನ್), ಭಕ್ತಿಗೆ ಭೀಮ...

ಪಿ. ಚಿದಾನಂದ, ಜವಗೊಂಡನಹಳ್ಳಿ

*ಇಲ್ಲೊಬ್ಬ ಒನಕೆ ಚಿಗುರುವುದು, ಭ್ರಷ್ಟಾಚಾರ ತೊಲಗುವುದು ಎರಡೂ ಒಂದೇ ಎನ್ನುತ್ತಿದ್ದಾನಲ್ಲಾ...?*



ಪ್ರತಿ ಹೆಣ್ಣೂ ಮನೆಯ ಗಂಡಸರು ತಂದ ಲಂಚವನ್ನು ನಿಷ್ಠುರವಾಗಿ ನಿರಾಕರಿಸಿದರೆ ಭ್ರಷ್ಟಾಚಾರ ತೊಲಗುತ್ತದೆ.

ಪ್ರದೀಪಕುಮಾರ, ಹೂವಿನಹಡಗಲಿ

*ಸಿರಿವಂತ ಮಕ್ಕಳು ಹೆತ್ತವರನ್ನು ವೃದ್ಧಾಶ್ರಮಕ್ಕಟ್ಟುತ್ತಾರೆ. ಬಡ ಮಕ್ಕಳು ಮನೆಯಲ್ಲೇ ನೋಡಿಕೊಳ್ಳುತ್ತಾರೆ. ಏಕೆ?*

ಬಡವರಿಗೆ ಕುಕ್, ಬೇಬಿ ಸಿಟ್ಟರ್, ಶಾಪಿಂಗ್ ಅಸಿಸ್ಟೆಂಟ್ ಇಟ್ಟುಕೊಳ್ಳಲು ಆಗದಲ್ಲ...

■ ರಾಮ್